# 'ಸುಧಾ' ಜೊತೆಗಿನ ಓದುಗರ ಒಡನಾಟ

### ಮರೆಯಲಾರದ ಖುಷಿ

ನನಗಾಗ ಹನ್ನೊಂದರ ಹರೆಯ. 1970ರಲ್ಲಿ ನಾನು ಓದುತ್ತಿದ್ದ ಹಳ್ಳಿ ಶಾಲೆಯಿಂದ ಮುಂದಿನ ಓದಿಗೆ ತಾಳಗುಪ್ಪಕ್ಕೆ ಹೋದ ನಂತರ, ವಿರಾಮದ ಸಮಯದಲ್ಲಿ ಕ್ಷೌರಿಕ ಅಂಗಡಿಯಲ್ಲಿ ಕೂತು 'ಸುಧಾ' ಓದುತ್ತಿದ್ದ ನೆನಪು ಅಚ್ಚಳಿಯದೆ ಉಳಿದಿದೆ. ಆಗ 'ಸುಧಾ'ದಲ್ಲಿ ಬರುತ್ತಿದ್ದ ಬಾಲ ವಿಹಾರ, ಫ್ಯಾಂಟಮ್, ಡಾನ್, ಮಜನೂ, ವಿಕ್ರಮ್ ಮುಂತಾದವುಗಳನ್ನು ಓದುತ್ತಲೇ ಓದುವ ಹವ್ಯಾಸ ಬೆಳೆಸಿಕೊಂಡೆ. ಆಗ ಮನೆಗೆ ವಾರಪತ್ರಿಕೆ ತರಿಸುವುದು ಕಷ್ಟವಿತ್ತು. ಹೀಗಾಗಿ ನಾನು ನೌಕರಿಗೆ ಸೇರಿದ ನಂತರ 'ಸುಧಾ' ಕೊಂಡು ಓದಲು ಶುರು ಮಾಡಿದೆ.

90ರ ದಶಕದಿಂದ ಚಿಕ್ಕಪುಟ್ಟ ಬರಹ ಬರೆಯುವ ಅಭ್ಯಾಸ ರೂಢಿಸಿಕೊಂಡೆ. ನನ್ನ ಬರಹಗಳನ್ನು ಚಿತ್ರ ಸಮೇತ ಪ್ರಕಟಿಸಿದ್ದು ಮರೆಯಲಾಗದ ಖುಷಿ. ಎಲ್ಲಾ ಧಾರಾವಾಹಿಗಳನ್ನು ಓದುತ್ತಾ ಪ್ರತಿಕ್ರಿಯಿಸುವ ಅಭ್ಯಾಸವನ್ನೂ ಬೆಳೆಸಿಕೊಂಡೆ.

—ಪಿ.ಎಚ್. ಪಾಟೀಲ್, ರಾಣೆಬೆನ್ನೂರು

### ಮನಗೆದ್ದ ಸೋದರಿ

ಪ್ರೀತಿಯ ತಂಗಿ 'ಸುಧಾ', ನಿನಗಿಂತ ನಾನು 5 ವರ್ಷ ದೊಡ್ಡವಳು. ನಾನು ಹೈಸ್ಕೂಲ್‌ಗೆ ಬಂದಾಗಿನಿಂದ ನಿನ್ನ ಜೊತೆ ಬೆಳೆದವಳು. 14ನೇ ವಯಸ್ಸಿನಲ್ಲಿದ್ದಾಗ ನನ್ನೆರಡು ಬರಹ 'ಕಿವಿಮಾತು' ಅಂಕಣದಲ್ಲಿ ಪ್ರಕಟವಾಗಿತ್ತು. ನಂತರ ಸುಮಾರು ವರ್ಷ ಬರೆಯುವುದನ್ನು ಬಿಟ್ಟಿದ್ದೆ. ಆಮೇಲೆ 2007ರಿಂದ ನಿನ್ನ ಒಡನಾಟ ಮತ್ತೆ ಶುರುವಾಯಿತು. ನಾನು ಮಾಡಿದ ಅಡುಗೆಗಳನ್ನು ನಿನಗೆ ರುಚಿ ನೋಡಲು ಕೊಡುತ್ತಿದ್ದೆ. ನೀನು ಸಂತೋಷದಿಂದ ಸ್ವೀಕರಿಸಿ ಅವುಗಳನ್ನು ಕರ್ನಾಟಕದ ಜನರಿಗೆ ಪರಿಚಯ ಮಾಡಿಕೊಟ್ಟಿದ್ದೀಯ, ಧನ್ಯವಾದಗಳು.

ನಿನಗೀಗ ಅರವತ್ತು. ವಯಸ್ಸಿನೊಂದಿಗೆ ಭಾವಗಳೂ ಉತ್ತಮಗೊಂಡು ಮನ ಗೆದ್ದಿದ್ದೀಯ.

—ವೀಣಾ ಶಂಕರ್, ಬೆಂಗಳೂರು

### 'ಸುಧಾ'ಳ ಮೋಹಜಾಲ

ನಾನು 3ನೇ ತರಗತಿಯಲ್ಲಿದ್ದಾಗ ನನ್ನ ತಾಯಿ ತರಿಸುತ್ತಿದ್ದ 'ಸುಧಾ' ನನ್ನನ್ನು ಆಕರ್ಷಿಸಿತ್ತು. ಸುಮಾರು 48 ವರ್ಷಗಳ ಸಾಂಗತ್ಯ 'ಸುಧಾ'ದೊಂದಿಗಿದೆ. ಬಾಲವಿಹಾರ, ಫ್ಯಾಂಟಮ್ ಓದಲು ಮುಗಿಬಿದ್ದು ನಂತರದ ದಿನಗಳಲ್ಲಿ ಟಿ.ಕೆ. ರಾಮರಾವ್, ಉಷಾ ನವರತ್ನರಾಮ್ ಮುಂತಾದವರ ಕಥೆಗಳಲ್ಲಿ ತೇಲಿ, ದಿನಕರ ದೇಸಾಯಿಯವರ ಚುಟುಕು ಪದ್ಯಗಳನ್ನು ಕಾತರದಿಂದ ಹುಡುಕುತ್ತಿದ್ದ ದಿನಗಳು ಕಳೆದು ಇನ್ನೂ 'ಸುಧಾ'ಳ ಮೋಹಜಾಲದಿಂದ ಹೊರಬಂದಿಲ್ಲ. ಸುಧಾಳಿಗೆ 60. ನಮಗೂ ಹತ್ತಿರತ್ತಿರ ಅಷ್ಟೇ... 'ಸುಧಾ' ದೀರ್ಘಾಯುಷಿಯಾಗಲಿ.

—ಚಂಪಾ ಸಿ.ಆರ್.

### ಕನ್ನಡಿಗರ ಕಣ್ಮಣಿ 'ಸುಧಾ'

ಒಲವಿನ 'ಸುಧಾ', ಅರವತ್ತನೇ ವರ್ಷಕ್ಕೆ ಕಾಲಿಟ್ಟಿರುವ ನಿನಗೆ ಹೃತ್ಪೂರ್ವಕ ಶುಭಹಾರೈಕೆಗಳು. ಅವತ್ತಿನಿಂದ ಇವತ್ತಿನವರೆಗೂ ಈ ಸುದೀರ್ಘ ವರ್ಷಗಳಲ್ಲಿ ನಿನ್ನ ಒಡನಾಟ ಎಷ್ಟು ಅಭ್ಯಾಸವಾಗಿಬಿಟ್ಟಿದೆಯೆಂದರೆ ನೀನು ಮನೆಯ ಆತ್ಮೀಯ ಸದಸ್ಯೆಯಾಗಿಬಿಟ್ಟಿರುವೆ. ನೀನು ಮನೆಗೆ ಬರುವ ದಿನ ನಿನ್ನ ನಿರೀಕ್ಷೆಯಲ್ಲಿ ಕಾದು ನಿಲ್ಲುವಷ್ಟು ಮನ ಗೆದ್ದಿರುವೆ.

ವಿವಿಧ ವಯೋಮಾನದ, ವಿಭಿನ್ನ ಅಭಿರುಚಿಯ, ಪ್ರತಿಯೊಬ್ಬರಿಗೂ ನಿನ್ನಲ್ಲಿನ ವಿಷಯ ವೈವಿಧ್ಯದಿಂದ ಮನರಂಜನೆಯೊಡನೆ ಸಮಕಾಲೀನ ಮಾಹಿತಿಗಳನ್ನೂ, ಅಪರೂಪದ ಸ್ಥಳಗಳ ಪರಿಚಯವನ್ನೂ, ಜ್ಞಾನದ ಬೆಳಕನ್ನೂ, ಹತ್ತೆಂಟು ವಿಷಯಗಳ ಕುರಿತಾದ ತಿಳಿವಳಿಕೆಯನ್ನೂ ನೀಡುತ್ತಿರುವೆ. ವಯಸ್ಸಿನೊಡನೆ ಆಕರ್ಷಣೆಯನ್ನು ಹೆಚ್ಚಿಸಿಕೊಂಡಿರುವೆ. ನನ್ನ ಮೊದಲ ಕತೆ 'ಜ್ವರ' ಪ್ರಕಟಿಸಿ ನನ್ನನ್ನು ಸಾಹಿತ್ಯಲೋಕಕ್ಕೆ ಪರಿಚಯಿಸಿದ, ನನ್ನ ಹಲವು ಕತೆ, ಕಾದಂಬರಿಗಳಿಗೆ ವೇದಿಕೆಯಾದ ನಿನಗೆ ಯಾವತ್ತೂ ನಾನು ಆಭಾರಿ. ಚಿರಕಾಲ ನೀನು ಹೀಗೆಯೇ ಕನ್ನಡಿಗರ ಕಣ್ಮಣಿಯಾಗಿರು.

—ವಸುಮತಿ ಉಡುಪ, ಮೈಸೂರು

### ನೆನಪಿನ ಸರಮಾಲೆ

ನನ್ನ, 'ಸುಧಾ' ಪತ್ರಿಕೆಯ ಒಡನಾಟ, ಅದರ ಬೆಲೆ 40 ಪೈಸೆಯಿಂದ ಈಗಿನ ದರ 25 ರೂಪಾಯಿಯವರೆಗೂ ಮುಂದುವರೆದಿದೆ. ಇಷ್ಟು ವರ್ಷಗಳಲ್ಲಿ ಪತ್ರಿಕೆಯ ಮೌಲ್ಯ, ಹೂರಣ ದಿನೇ ದಿನೇ ವೃದ್ಧಿಗೊಳ್ಳುತ್ತಿದೆ. ಅಂದು ಪ್ರಕಟಗೊಳ್ಳುತ್ತಿದ್ದ ನಾಡಿಗ್, ಕೆ.ಆರ್. ಸ್ವಾಮಿ, ಶ್ರೀಕಾಂತ್ ನಂಜುಂಡಸ್ವಾಮಿ, ಹರಿಣಿ ಇವರ ವ್ಯಂಗ್ಯಚಿತ್ರಗಳು, ಮಹಿಳೆಯರಿಗಾಗಿ ಕಾಮಧೇನು ವಿಭಾಗ, ನೀವು ಕೇಳಿದಿರಿ ವಿಭಾಗದಲ್ಲಿ ಬೀಚಿ, ನವರತ್ನರಾಂ ಉತ್ತರ ಭೂಪರ ಚುಟುಕು ಚಾಟಿಯ ಕಚಗುಳಿ ಇಡುತ್ತಿದ್ದ ಉತ್ತರಗಳು, ಎಚ್ಚೆಸ್ಕೆಯವರ ವಾರದ ವ್ಯಕ್ತಿ, ಲೇಖನಗಳು, ಕಥೆ... ಹೀಗೆ ನೆನಪಿನ ಸರಮಾಲೆಗೆ ಅಂತ್ಯವಿಲ್ಲ. ಸಣ್ಣ ಪುಟ್ಟ ಲೇಖನಗಳನ್ನು ಬರೆಯಲು ಹುರಿದುಂಬಿಸಿ ಪ್ರೋತ್ಸಾಹ ನೀಡುತ್ತಿರುವ 'ಸುಧಾ' ಇನ್ನೂ ಎತ್ತರೆತ್ತರಕ್ಕೆ ಬೆಳೆಯಲಿ.

—ಸಿಹಿಮೊಗೆ ರಮೇಶ್, ಮೈಸೂರು

### ಗುರುವಾರಕ್ಕೆ ಕಾಯುತ್ತೇನೆ

ನಾನು 50 ವರ್ಷಗಳಿಂದ 'ಸುಧಾ'ಳ ಆರಾಧಕ. ಈಗಲೂ ಗುರುವಾರಕ್ಕಾಗಿ ಕಾಯುತ್ತಿರುತ್ತೇನೆ. ಪತ್ರಿಕೆ ವಿತರಕ ತಡವಾಗಿ ಬಂದಾಗ ಅವನೊಡನೆ ಜಗಳವಾಡಿದ್ದೂ ಇದೆ. ಪತ್ರಿಕೆಯಲ್ಲಿ ಬರುವ 'ನೀವು ಕೇಳಿದಿರಿ?' ನನಗೆ ಬಹಳ ಅಚ್ಚುಮೆಚ್ಚು. ನನ್ನ 'ಸುಧಾ' ಇನ್ನೂ ಹೆಚ್ಚು ಕಾಲ ಬಾಳಿ ಬೆಳಗಲೆಂದು ಹಾರೈಸುತ್ತೇನೆ.

—ಬಿದರಹಳ್ಳಿ ಚನ್ನವೀರಪ್ಪ ಹಿರೇಹಡಗಲಿ

### ಆತ್ಮೀಯ ಗೆಳತಿಗೆ,

ನಾನು ಪ್ರೌಢಶಾಲೆಯಲ್ಲಿರುವಾಗಲೇ ಕಥೆ, ಕಾದಂಬರಿ ಓದುತ್ತಿದ್ದೆ. ಆಗ ಅಮ್ಮ ನನಗೆ 'ಸುಧಾ' ಪರಿಚಯಿಸಿದರು. ಕಾಮಧೇನು ವಿಭಾಗ, ಮಕ್ಕಳ ಕಥೆಗಳು ತುಂಬಾ ಆಕರ್ಷಕವಾಗಿ ಮೂಡಿಬರುತ್ತಿದ್ದವು. ಈಗಲೂ ಗುರುವಾರ 'ಸುಧಾ' ಕೈಸೇರದಿದ್ದರೆ ಏನೋ ತಳಮಳ. ನಾನು ಲೇಖಕಿಯಾಗಿ ಗುರುತಿಸಿಕೊಳ್ಳಲು ಸುಧಾ ಪತ್ರಿಕೆಯೇ ಕಾರಣ. ನನ್ನ ಕಾದಂಬರಿ 'ವಿಮುಕ್ತೆ' ಪ್ರಕಟಣೆ ಆರಂಭವಾದಾಗ ಅಮ್ಮ 'ಸುಧಾ' ಹಿಡಿದು ಅತ್ತಿದ್ದು ಮನದಲ್ಲಿ ಅಚ್ಚೊತ್ತಿದೆ. ಈಗಲೂ, ಎಂದೆಂದಿಗೂ 'ಸುಧಾ' ನನ್ನ ಆತ್ಮೀಯ ಗೆಳತಿ.

—ಸಿ.ಎನ್. ಮುಕ್ತಾ

### ಬರವಣಿಗೆಗೆ ಪ್ರೇರಣೆ

ನನ್ನ ಪುಟ್ಟ ಬರಹ, ಚಿಣ್ಣರ ಕಥೆ, ಕವನಗಳನ್ನು ಪ್ರಕಟಿಸಿ, ಪ್ರೋತ್ಸಾಹ ನೀಡಿ ನನ್ನನ್ನು ಬರವಣಿಗೆಗೆ ಪ್ರೇರೇಪಿಸಿದ 'ಸುಧಾ'ಗೆ ಹೃತ್ಪೂರ್ವಕ ವಂದನೆಗಳು.

—ನರಸಿಂಹಾರೆಡ್ಡಿ ಯಂಕಾಮೋಳ, ಸೇಡಂ

### ಅಚ್ಚುಮೆಚ್ಚಿನ ಅಂಕಣಗಳು

ಚಂದಮಾಮ, ಬಾಲಮಿತ್ರ ಘಟ್ಟ ದಾಟಿದಂತೆ 'ಸುಧಾ' ಮೆಚ್ಚಿನ ವಾರಪತ್ರಿಕೆಯಾಯ್ತು. ಪ್ರವಾಸ, ಕಥೆ, ಧಾರಾವಾಹಿ, ಪ್ರಬಂಧ, ನಗೆ ಬರಹ, ಚಾಲ್ತಿ ವಿಷಯಗಳು, ಸಾಮಾನ್ಯಜ್ಞಾನ, ಜನಪ್ರಿಯ ವಿಜ್ಞಾನ, ಎಳೆಯರ ಅಂಗಳ, ಪ್ರಶ್ನಾಂಕಣದ ವೈಜ್ಞಾನಿಕ ಮಾಹಿತಿಗಳು ನನಗೆ ಅಚ್ಚುಮೆಚ್ಚು.

—ಶಶಿಧರ ಎಲೆ, ಬೆಂಗಳೂರು